# ಮುಳಬಾಗಿಲು ತಾಲೂಕಿನ ಸ್ಥಳನಾಮಗಳು

**ಸಿ. ನಾಗರಾಜ***

DOI: https://doi.org/10.5281/zenodo.20614576

**ABSTRACT**

ಸಮಾಜ ಜೀವಿಯಾದ ಮಾನವ ಪ್ರತಿನಿತ್ಯ ಅನೇಕ ವ್ಯಕ್ತಿ, ವಸ್ತು, ಸ್ಥಳಗಳ ಜೊತೆಗೆ ವ್ಯವಹರಿಸುವುದುಂಟು. ಅಂಥ ಸಂದರ್ಭದಲ್ಲಿ ವ್ಯಕ್ತಿ, ವಸ್ತು, ಸ್ಥಳಗಳನ್ನು ಗುರುತಿಸಲು, ಒಂದರಿಂದ ಮತ್ತೊಂದನ್ನು ಪ್ರತ್ಯೇಕಿಸಲು 'ಹೆಸರು' ಅತ್ಯಗತ್ಯ ಮತ್ತು ಅನಿವಾರ್ಯ. ಹಾಗಾಗಿ ಮನುಷ್ಯ ಭಾಷೆ ಕಲಿತ ಮೇಲೆ ಪ್ರತಿಯೊಂದು ವಸ್ತು, ಸ್ಥಳ, ವ್ಯಕ್ತಿಗೆ ಹೆಸರು ಇಡತೊಡಗಿದ.

ಹೆಸರುಗಳನ್ನು ವ್ಯಾಕರಣ ಪರಿಭಾಷೆಯಲ್ಲಿ 'ನಾಮ'ವೆಂದು ಕರೆಯಲಾಗುತ್ತದೆ. ನಾಮಗಳ ವೈಜ್ಞಾನಿಕವಾದ ಅಧ್ಯಯನ ನಾಮ ವಿಜ್ಞಾನವಾಗಿದೆ. ಇಂಗ್ಲೀಷ್‌ನಲ್ಲಿ ಇದನ್ನು 'Onomastics' ಎಂದು ಕರೆಯುತ್ತಾರೆ. ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ನಾಮಲಿಂಗವನ್ನು ಹೇಳುವಾಗ ರೂಢನಾಮ, ಅಂಕಿತನಾಮ, ಅನ್ವರ್ಥನಾಮವೆಂದು ಹೇಳಿದ್ದಾನೆ. ನಾಮಶಾಸ್ತ್ರದಲ್ಲಿ 'ವ್ಯಕ್ತಿನಾಮ' ಮತ್ತು 'ಸ್ಥಳನಾಮ' ಎಂದು ಎರಡು ವಿಧಗಳನ್ನು ಹೇಳಲಾಗಿದೆ. ವ್ಯಕ್ತಿನಾಮಗಳು ವೈಯಕ್ತಿಕವಾದವು. ಸ್ಥಳನಾಮಗಳು, ಸಾರ್ವಜನಿಕವಾದವು, ಸರ್ವಕಾಲಿಕವೂ ಹೌದು. ವ್ಯಕ್ತಿಗಳನಾಮಗಳಿಗೆ ಸಂಬಂಧಿಸಿದಂತೆ ನಡೆಯುವ ಅಧ್ಯಯನವು ವ್ಯಕ್ತಿನಾಮ ವಿಜ್ಞಾನವಾದರೆ, ಸ್ಥಳನಾಮಗಳಿಗೆ ಸಂಬಂಧಿಸಿದಂತೆ ನಡೆಯುವ ಅಧ್ಯಯನವು ಸ್ಥಳನಾಮ ವಿಜ್ಞಾನವಾಗಿದೆ.

ಸ್ಥಳಗಳಿಗೆ ಇಟ್ಟ ಹೆಸರುಗಳೇ 'ಸ್ಥಳನಾಮಗಳು' (Toponymy). ಅವುಗಳ ಅಧ್ಯಯನವೇ ಸ್ಥಳನಾಮ ವಿಜ್ಞಾನ (Toponomastics). ಸ್ಥಳನಾಮಗಳನ್ನು ವಸತಿಯ ಸ್ಥಳಗಳು, ನಿರ್ವಸತಿಯ ಸ್ಥಳಗಳು ಎಂದು ಗುರುತಿಸಲಾಗಿದೆ. ವಸತಿಯ ಸ್ಥಳಗಳೆಂದರೆ ಹಳ್ಳಿ, ಗ್ರಾಮ, ಪಟ್ಟಣಗಳಾಗಿವೆ. ನಿರ್ವಸತಿಯ ಸ್ಥಳಗಳೆಂದರೆ ಬೆಟ್ಟ, ಗುಡ್ಡ, ನದಿ, ಕೆರೆ, ಕಟ್ಟೆ, ನಾಲೆಗಳ ಹೆಸರು (Hydronymy) ಮತ್ತು ಕೆರೆ, ದಾರಿ, ರಸ್ತೆಗಳ ಹೆಸರುಗಳು (Mycrotoponymy) ಆಗಿವೆ.

"ಪ್ರಾಚೀನವಾದ ಸ್ಥಳನಾಮಗಳು ಅರ್ಥಗರ್ಭಿತವಾಗಿವೆ. ಒಂದು ಪ್ರದೇಶದಲ್ಲಿರುವ ನದಿ, ಬೆಟ್ಟ, ಕಲ್ಲು, ಮರ, ಮಣ್ಣು, ದೇವಾಲಯ, ಕೋಟೆ, ಮೊದಲಾದವುಗಳು

* **ಡಾ. ಸಿ. ನಾಗರಾಜ,** ಸಹಾಯಕ ಪ್ರಾಧ್ಯಾಕರು, ಕನ್ನಡ ವಿಭಾಗ, ರೇವಾ ವಿಶ್ವವಿದ್ಯಾಲಯ, ಬೆಂಗಳೂರು.

ಆ ಸ್ಥಳದ ಚರಿತ್ರೆಯನ್ನು ತಿಳಿಸಲು ನೆರವಾಗುವಂತೆ ಸ್ಥಳನಾಮಗಳು ಕೂಡ ಆಯಾ ಸ್ಥಳಗಳ ಚರಿತ್ರೆಗೆ ಪೂರಕವಾಗುವ ಅನೇಕ ಮಾಹಿತಿಯನ್ನು ನೀಡುತ್ತವೆ. ಆದ್ದರಿಂದ ಸ್ಥಳನಾಮಗಳನ್ನು ಜೀವಂತ ಪಳೆಯುಳಿಕೆಗಳು ಎಂದು ಕರೆಯುತ್ತಾರೆ."

ನೀರಿಗೆ ಅಭಾವವಿರುವ ಜಿಲ್ಲೆಯ ಒಟ್ಟು ಸ್ಥಳನಾಮಗಳ ಪೈಕಿ ಸುಮಾರು 400 ಗ್ರಾಮಗಳು 30ಕ್ಕೂ ಹೆಚ್ಚು ಜಲಸಂಬಂಧಿ ಹೆಸರುಗಳಿಂದ ಕೂಡಿವೆ. ಅಂಬುಧಿ, ಸಂದ್ರ (ಸಮುದ್ರ), ಸಾಗರ, ಏರಿ, ಸಿಟ್ಟು, ಕಡವು, ಕುಂಟೆ, ಕೊಳ, ಕೋಡಿ, ಚೆರುವು, ದೊಣೆ, ಮಡುವು ಮುಂತಾದವು. ಇವುಗಳಲ್ಲಿ ಸುಮಾರು 100 ಸ್ಥಳಗಳು ಸಂದ್ರ (ಸಮುದ್ರ)ದಿಂದ ಅಂತ್ಯಗೊಂಡಿರುವುದು ಕುತೂಹಲಕರವಾಗಿದೆ.

ಸಾಮಾಜಿಕ ಅಂಶಗಳಲ್ಲಿ ವ್ಯಕ್ತಿನಾಮ, ಜಾತಿ, ಬುಡಕಟ್ಟು, ಮತ, ವಾಸ್ತು, ಘಟನೆ, ಬಿರುದು, ದೇವತೆ, ವೃತ್ತಿ ಸಾದೃಶ್ಯಗಳನ್ನು ಸ್ಥಳನಾಮಗಳಲ್ಲಿ ಗುರುತಿಸಬಹುದು. ವರ್ಣನಾತ್ಮಕದಲ್ಲಿ ಸ್ಥಳ, ದಿಕ್ಕು, ಗ್ರಾಮನಾಮ, ವರ್ಣ.

**KEYWORDS:** ಶೈವ ಪರಂಪರೆ, ವೈಷ್ಣವ ಪರಂಪರೆ, ಜೈನ ಪರಂಪರೆ, ಕೀಟವಾಚಕ, ಕೋಣನಗುಂಟೆ.

ಮುಳಬಾಗಿಲು ತಾಲೂಕಿನ ಸ್ಥಳನಾಮಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು.

## 1. ಭೌಗೋಳಿಕ ವರ್ಗೀಕರಣ

ಈ ಭಾಗದಲ್ಲಿ ಭೌಗೋಳಿಕ ವರ್ಗೀಕರಣದ ಜಲಸೂಚಕ ಸ್ಥಳನಾಮಗಳು, ಭೂವಾಚಕ ಸ್ಥಳನಾಮಗಳು, ಪ್ರಾಣಿ ಮತ್ತು ಪಕ್ಷಿವಾಚಕ ಸ್ಥಳನಾಮಗಳು, ಕೀಟವಾಚಕ, ದಿಗ್ವಾಚಕ ಮತ್ತು ಪರಿಮಾಣವಾಚಕಗಳ ಹಿನ್ನೆಲೆಯ ಬಗ್ಗೆ ವಿವರಿಸುವ ಗ್ರಾಮಗಳನ್ನು ಉದಾಹರಿಸಬಹುದು.

ಸಾಂಸ್ಕೃತಿಕ ವರ್ಗೀಕರಣದ ಸ್ಥಳನಾಮಗಳು, ಜಾತಿವಾಚಕ ಸ್ಥಳನಾಮಗಳು, ವ್ಯಕ್ತಿವಾಚಕ ಸ್ಥಳನಾಮಗಳ ಹೊಸ/ಹಳೆ ವಿಶೇಷಣವುಳ್ಳ ಸ್ಥಳನಾಮವರ್ಗ, ವಾಸ್ತವ್ಯ ಸೂಚಕ ಸ್ಥಳನಾಮಗಳು, ಧಾರ್ಮಿಕ ವಾಚಕ ಸ್ಥಳನಾಮಗಳು (ಶೈವ ಪರಂಪರೆ, ವೈಷ್ಣವ ಪರಂಪರೆ, ಜೈನ ಪರಂಪರೆ, ಮುಸ್ಲಿಂ ಇತ್ಯಾದಿ) ಈ ಸ್ಥಳಗಳ ಬಗ್ಗೆ ವಿವರಗಳನ್ನು ನೀಡುತ್ತಾ ಉದಾಹರಣೆಗಳನ್ನು ನೀಡಲಾಗಿದೆ. ಒಂದೇ ಹೆಸರಿನ ಅನೇಕ ಗ್ರಾಮಗಳ ಪಟ್ಟಿಯನ್ನು ನೀಡಲಾಗಿದೆ.

ಮುಳಬಾಗಿಲಿನ ಸ್ಥಳನಾಮಗಳಲ್ಲಿ ವಿವಿಧ ಬಗೆಯ ವರ್ಗೀಕರಣಗಳಾದ ಘಟ್ಟ, ಹಳ್ಳಿ, ಪಲ್ಲಿ, ಪುರ, ನಗರ, ಬೀಡು, ಸಮುದ್ರ, ಕುಪ್ಪೆ, ಕೆರೆ, ಊರು, ಪುರ, ವಣಿ ಇತ್ಯಾದಿ ಕಂಡುಬರುತ್ತವೆ. ಇವುಗಳ ಸಹಾಯದಿಂದ ಸ್ಥಳನಾಮಗಳ ಅಧ್ಯಯನಕ್ಕೆ ಉಪಯುಕ್ತ ಮಾಹಿತಿ ಲಭ್ಯವಿದೆ. ಸ್ಥಳನಾಮಗಳ ಅಧ್ಯಯನದ ಸಂದರ್ಭದಲ್ಲಿ

ನಿರ್ದಿಷ್ಟಗಳನ್ನು ಇಟ್ಟುಕೊಂಡು ವರ್ಗೀಕರಣ ಮಾಡಿಕೊಳ್ಳುವುದು ಅತ್ಯಂತ ಮಹತ್ವದ್ದಾಗಿದೆ. ತಾಲೂಕಿನಾದ್ಯಂತ ಅಧ್ಯಯನ ಮಾಡಿದಾಗ ಭೌಗೋಳಿಕ ಅಂಶಗಳ ಆಧಾರದ ಮೇಲೆ ವರ್ಗೀಕರಿಸಲಾಗಿದೆ.

### 1.1 ಜಲವಾಚಕ ಸ್ಥಳನಾಮಗಳು

ಜೀವರಾಶಿಗಳಿಗೆ ಗಾಳಿಯನ್ನು ಬಿಟ್ಟರೆ ನೀರು ಅತ್ಯಂತ ಅವಶ್ಯಕವಾದುದು. ಮನುಷ್ಯನು ಅಲೆಮಾರಿ ಜೀವನಕ್ಕೆ ತಿಲಾಂಜಲಿಯನ್ನಿಟ್ಟು ನೀರಿನ ಮೂಲದ ಸ್ಥಳದಲ್ಲಿ ಸ್ಥಿರವಾಗಿ ನೆಲೆಸಲು ಪ್ರಾರಂಭಿಸಿದ. ಇದು ಸ್ಥಳನಾಮ ಸೃಷ್ಟಿಗೊಳ್ಳುವುದಕ್ಕೆ ಕಾರಣವಾಗುತ್ತದೆ. ಇಂತಹ ಹಿನ್ನೆಲೆಯಲ್ಲಿ ಕೆರೆ, ಸಮುದ್ರ, ಕಟ್ಟೆ, ಕೋಡಿ, ಮಡುವು, ಹೊಳೆ, ಗಂಗೆ, ತೊರೆ, ಜಲ ಇತ್ಯಾದಿ ಜಲವಾಚಕಗಳು ಸ್ಥಳನಾಮಗಳ ಗುಂಪಿನಲ್ಲಿ ಸೇರಿಕೊಳ್ಳುತ್ತವೆ.

- **ಕೋಡಿ:** ಕೋಡಿಹಳ್ಳಿ
- **ಗಂಗೆ:** ಗಂಗಾಪುರ, ಗಂಗನಹಳ್ಳಿ
- **ಕೆರೆಗೆರೆ:** ಮುದಿಗೆರೆ, ತಾವರೆಕೆರೆ, ಹೊಸಕೆರೆ, ಹೊನ್ನಿಕೆರೆ, ಕಲಿಕೆರೆ
- **ಜಲ:** ಜಲಪಲ್ಲಿ, ಜಲಶೆಟ್ಟಿಹಳ್ಳಿ
- **ಸಮುದ್ರ:** ದೇವರಾಯ ಸಮುದ್ರ, ಕನ್ನಸಂದ್ರ, ಬೊಮ್ಮಸಂದ್ರ, ದೊಮ್ಮಸಂದ್ರ, ದುಗ್ಗಸಂದ್ರ, ನಾಗಸಂದ್ರ, ವಮ್ಮಸಂದ್ರ, ಬೈರಸಂದ್ರ, ಅಳಾಲಸಂದ್ರ, ಮಲ್ಲಸಂದ್ರ, ಬಾಲಸಂದ್ರ, ಸಂಗಸಂದ್ರ
- **ತೊರೆ:** ತೊರಡಿ
- **ಹೇರು:** ಮರೇರು, ಬೂದಿಹೇರು, ಕೋಗಿಲೇರು 2, ಮೇಲೇರಿ
- **ಕುಂಟೆ:** ಊರುಕುಂಟೆ, ಗೋಕುಂಟೆ, ನಿಚ್ಚನಗುಂಟೆ, ಚೋಳಗುಂಟೆ, ಸುಣಪಗುಂಟೆ, ಕೋಣನಗುಂಟೆ, ಮುರುಕನ ಗುಂಟೆ, ಗೊಟ್ಟುಗುಂಟೆ, ಅತ್ತಿಕುಂಟೆ, ಗುಂಜಿಗುಂಟೆ, ಜಿನಗೇನಗುಂಟೆ, ಸೂರಕುಂಟೆ
- **ಬಾವಿ:** ಗಾಜಲಬಾವಿ
- **ಊಗು:** ಊಗುಪಲ್ಲಿ
- **ಒಡ್ಡು:** ಭೀಮನ ಒಡ್ಡು, ವೊಡ್ಡಗುಟ್ಟಹಳ್ಳಿ, ಚೆಮನವೊಡ್ಡು

### 1.2 ಭೂವಾಚಕ ಸ್ಥಳನಾಮಗಳು

ಮುಳಬಾಗಿಲು ತಾಲೂಕಿನಲ್ಲಿ ಭೌಗೋಳಿಕ ಅಂಶಗಳಾದ ಕಲ್ಲು, ಬೆಟ್ಟ, ಕುಪ್ಪೆ, ಗದ್ದೆ, ಅರೆ, ಗುಡ್ಡ, ಗವಿ ಇತ್ಯಾದಿ ಕಂಡುಬರುತ್ತವೆ.

- **ಘಟ್ಟ:** ಪದ್ಮಘಟ್ಟ, ಆವಲಮರಕಲಘಟ್ಟ, ಚಿಕ್ಕಪದ್ಮಘಟ್ಟ, ಸಿದ್ದಘಟ್ಟ, ಮಾದಘಟ್ಟ, ಮಣಿಘಟ್ಟಮಿಟ್ಟ, ದೊಬರಮಿಟ್ಟ
- **ಕೊಂಡ:** ಕೊಂಡತಿಮ್ಮನಹಳ್ಳಿ, ಕೊಂಡೇನಹಳ್ಳಿ, ಕೊಂಡಹಳ್ಳಿ, ಅಪ್ಪಿಕೊಂಡೇನಹಳ್ಳಿ
- **ಗಿರಿ:** ಕೃಷ್ಣಗಿರಿ
- **ಕೋಟೆ:** ರಾಮರಾಯನ ಕೋಟೆ

- **ಬಂಡ:** ಬಂಡಹಳ್ಳಿ, ಕುನಿಬಂಡ, ಚಿಕ್ಕ/ದೊಡ್ಡ ಬಂಡಹಳ್ಳಿ, ಕಚ್ಚಬಂಡಹಳ್ಳಿ, ನಾಚಗುಂಡ್ಲಹಳ್ಳಿ, ಗುಟ್ಲೂರು
- **ಕಲ್ಲು:** ಕಲ್ಲರಸನಹಳ್ಳಿ, ಶೆಟ್ಟಿಕಲ್ಲು, ಗುಮ್ಮಕಲ್ಲು, ಮಂಡಿಕಲ್ಲು, ತಾತಿಕಲ್ಲು, ಅಂಬ್ಲಿಕಲ್ಲು
- **ಬೆಟ್ಟ:** ಬೆಟಗೇರಹಳ್ಳಿ
- **ಮಿಟ್ಟ:** ದೊಂಬರಮಿಟ್ಟ, ಮಿಟ್ಟಪಲ್ಲಿ, ಮಿಟ್ಟೂರು, ಮಣಿಘಟ್ಟಮಿಟ್ಟ
- **ಊರು:** ಗಡೂರು, ಮುಡಿಯನೂರು, ಬೂದಿಹೇರು, ಸಾತನೂರು, ಕುರುಡುಗೂರು, ಕೊರವೆನೂರು, ಕಾಮನೂರು, ಉತ್ತನೂರು, ನಲೂರು
- **ಕುಪ್ಪೆ:** ಮಲ್ಲೆಕುಪ್ಪೆ, ಕುಪ್ಪಾಂಡಹಳ್ಳಿ, ಹಳೆಕುಪ್ಪೆ, ಕುಪ್ಪಂಪಾಳ್ಯ
- **ಗಡ್ಡೆ:** ಗಡೂರು, ಗಡಿಂಡ್ಲು
- **ದಿನ್ನೆ:** ರಾಯಲಮಾನ ದಿನ್ನೆ, ದಿನ್ನಹಳ್ಳಿ

## 1.3 ಸಸ್ಯವಾಚಕ ಸ್ಥಳನಾಮಗಳು

ಮುಳಬಾಗಿಲು ತಾಲೂಕಿನ ಸ್ಥಳನಾಮಗಳಲ್ಲಿ ಬೆಳೆ, ಧಾನ್ಯ, ಕಾವಲು, ಹೂವು, ಗಿಡ, ಮರ ಇತ್ಯಾದಿ ಸಸ್ಯವಾಚಕ ಘಟಕಗಳನ್ನು ಹೊಂದಿರುವ ಸ್ಥಳ ನಾಮಗಳನ್ನು ಕಾಣುತ್ತೇವೆ.

- **ಸೀಗೆಮರ:** ಸೀಗೇನಹಳ್ಳಿ, ಸೀಗೆಹೊಸಹಳ್ಳಿ
- **ಹೊನಗೇನೆ:** ಹೊನಗೇನಹಳ್ಳಿ, ಹೊನ್ನಶೆಟ್ಟಿಹಳ್ಳಿ
- **ಬೇವು:** ಬೇವನತ್ತ, ಬೆವಹಳ್ಳಿ
- **ಬನ/ಜಂಗಲ:** ಬನಹಳ್ಳಿ, ಜಂಗೇಲ ಹಳ್ಳಿ
- **ಯಳಚೇಮರ:** ಯಳಚೇಪಲ್ಲಿ
- **ಮುತ್ತುಗ:** ಮೋದಕಪಲ್ಲಿ
- **ಕಾಷ್ಟಿ:** ಪದಕಾಷ್ಟಿ, ಜೋಗಲ ಕಾಷ್ಟಿ
- **ಕಾಡು:** ಕಾಡೇನಹಳ್ಳಿ, ಕಾಡುಕಚ್ಚನಹಳ್ಳಿ
- **ಕಾಶಿ:** ಕಾಶಿಪುರ
- **ನೇರಳೆ:** ನೆರ್ನನಹಳ್ಳಿ, ಜಮ್ಮನಹಳ್ಳಿ
- **ಹುಲ್ಲು:** ಕಸುವಗಾನಹಳ್ಳಿ, ಕಸುವಿರಡ್ಡಿಹಳ್ಳಿ
- **ಮರ:** ಮರವೇಮನೆ, ಮರಹೇರು
- **ತಾವರೆ:** ತಾವರೆಕೆರೆ
- **ಗೇರುಸೊಪ್ಪು:** ಬೆಟ್ಟಗೇರಹಳ್ಳಿ
- **ಮೋಪು:** ಮೋಪುರಹಳ್ಳಿ

## 1.4 ಪಕ್ಷಿವಾಚಕ ಸ್ಥಳನಾಮಗಳು

- ಕೋಗಿಲೇರು, ಕೋಡಿಹಳ್ಳಿ (ಕೋಳಿ)

### 1.5 ಪ್ರಾಣಿವಾಚಕ ಸ್ಥಳನಾಮಗಳು:

ಕುಕ್ಕಲದೊಡ್ಡಿ, ಕುನಿಬಂಡ, ಪುಲಿಪಾಪೇನಹಳ್ಳೀ, ಕೋಣನಗುಂಟೆ, ಎಮ್ಮೆನತ್ತ, ಕರಡಿಗಾನಹಳ್ಳಿ, ಆವಲಮರಕಲಘಟ್ಟ, ದೂಲಪಲ್ಲ, ಪುಲಿಓಬರೆಡ್ಡಿಹಳ್ಳಿ, ಬಸವರಾಜಪುರ, ಗೋಪಸಂದ್ರ, ಬಾಲಸಂದ್ರ, ಗೋಕುಂಟೆ

### 1.6 ಪರಿಮಾಣವಾಚಕ ಸ್ಥಳನಾಮಗಳು:

ತಾಲೂಕಿನ ಸ್ಥಳನಾಮಗಳಲ್ಲಿ ಚಿಕ್ಕ-ದೊಡ್ಡ ಎಂಬ ಪರಿಮಾಣ ಪ್ರತ್ಯಯಗಳನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಇವು ಸಾಮಾನ್ಯವಾಗಿ ವಲಸೆ ಬಂದು ಉಪಗ್ರಾಮ ಹೆಸರನ್ನು ಸೂಚಿಸುವಾಗ ಈ ಪರಿಮಾಣವಾಚಕಗಳು ಬಳಕೆಯಾಗಿವೆ. ಇವು ಸಾಮಾನ್ಯವಾಗಿ ಆದಿ ದ್ರಾವಿಡರಿಂದ ವಿಭಾಗಿಸಿ ಹೊರಬಂದ ಜನರು ನೆಲೆಯಾಗಿಸಿದ ಸ್ಥಳನಾಮಗಳು ಕೂಡ ಆಗಿವೆ.

- **ಚಿಕ್ಕ ಪದ್ಮಘಟ್ಟ:** ದೊಡ್ಡ ಬಂಡಹಳ್ಳಿ
- **ಚಿಕ್ಕಬಂಡಹಳ್ಳಿ:** ದೊಡ್ಡ ಅತ್ತಹಳ್ಳಿ
- **ಚಿಕ್ಕನಹಳ್ಳಿ:** ದೊಡ್ಡ ಗುಟ್ಟಹಳ್ಳಿ
- **ಚಿಕ್ಕಗುಟ್ಟಹಳ್ಳಿ:** ದೊಡ್ಡ ತಮ್ಮನಹಳ್ಳಿ
- **ಚಿನ್ನಹಳ್ಳಿ:** ದೊಡ್ಡಗುರ್ಕಿ
- **ಚಿಕ್ಕನಾಗವಾರ:** ದೊಡ್ಡಹೊನ್ನಶೆಟ್ಟಹಳ್ಳಿ
- **ಚಿನ್ನಬಾಳಪಲ್ಲಿ:** ದೊಡ್ಡಅತ್ತಹಳ್ಳಿ

### 1.7 ಕೀಟವಾಚಕ ಸ್ಥಳನಾಮಗಳು

- **ಹಾವು:** ನಾಗೇನಹಳ್ಳಿ, ನಾಗನಹಳ್ಳಿ, ನಾಗರೆಡ್ಡಿಹಳ್ಳಿ, ನಾಗರಹಳ್ಳಿ, ವಜ್ರನಾಗೇನಹಳ್ಳಿ, ನಾಗಸಂದ
- **ಹಲ್ಲಿ(ಪಲ್ಲಿ ):** ದೂಲಪಲ್ಲಿ, ಚಿನ್ನಪಲ್ಲಿ, ಯಳಚೇಪಲ್ಲಿ, ದಾಸೇಪಲ್ಲಿ, ಆಚಂಪಲ್ಲಿ, ಗುಡಿಪಲ್ಲಿ, ಊಗುಪಲ್ಲಿ
- **ಕಪ್ಪೆ:** ಕಪ್ಪಲಮಡುಗು

## 2. ಸಾಂಸ್ಕೃತಿಕ ವರ್ಗೀಕರಣ

ಮುಳಬಾಗಿಲು ತಾಲೂಕಿನಲ್ಲಿ ಸ್ಥಳನಾಮಗಳನ್ನು ಅಧ್ಯಯನ ಮಾಡುವಾಗ ಸಾಂಸ್ಕೃತಿಕವಾದ ಮಾಹಿತಿಗಳು ಲಭ್ಯವಾಗುತ್ತವೆ. ಈ ಸ್ಥಳನಾಮಗಳಲ್ಲಿ ಸಾಮಾಜಿಕ, ಭಾಷಿಕ, ಐತಿಹಾಸಿಕ, ಧಾರ್ಮಿಕವಾದ ಹಿನ್ನೆಲೆ ಹೊಂದಿರುವ ದಾಖಲೆಗಳು ಕಂಡುಬರುತ್ತವೆ. ಸಾಂಸ್ಕೃತಿಕ ಸ್ಥಳನಾಮಗಳನ್ನು ವಿಶ್ಲೇಷಿಸಿ ವರ್ಗೀಕರಿಸಲಾಗಿದೆ.

### 2.1 ವೃತ್ತಿ ವಾಚಕ ಸ್ಥಳನಾಮಗಳು

ತಾಲೂಕಿನಲ್ಲಿ ವೃತ್ತಿವಾಚಕ ಸ್ಥಳನಾಮಗಳೂ ಇವೆ. ಪುರಾತನ ಕಾಲದಿಂದಲೂ ಕಸುಬಿನ ಪರಂಪರೆಯನ್ನು ರೂಢಿಸಿಕೊಂಡು ಬಂದಿರುವುದನ್ನು ಇಂದಿಗೂ ಕಾಣುತ್ತೇವೆ. ಇಂತಹ ವೃತ್ತಿಗಳು ಸ್ಥಳನಾಮಗಳು ಹುಟ್ಟಿಕೊಳ್ಳಲು ಕಾರಣವಾಗುತ್ತವೆ.

ಉದಾ: ವಡ್ಡರಹಳ್ಳಿ, ಪೂಜಾರಹಳ್ಳೀ, ಕಸವುಗಾನಹಳ್ಳಿ, ಬೆಸ್ತರಹಳ್ಳಿ, ಬಲಶೆಟ್ಟಿಹಳ್ಳಿ, ಜಂಗಮಹೊಸಹಳ್ಳಿ, ಗಾಜುಲಬಾವಿ, ಸನ್ಯಾಸಪಲ್ಲಿ, ದೊಂಬರ ಗುಡಿಸಲು, ಜೋಗಲಕಾಷ್ಠಿ, ದಾಸರಹಳ್ಳಿ, ದೊಂಬರ ಮಿಟ್ಟ, ಬ್ಯಾಡರಹಳ್ಳಿ, ದಾಸಾರ್ಲಹಳ್ಳಿ ಇತ್ಯಾದಿ.

## 2.2 ಜಾತಿವಾಚಕ ಸ್ಥಳನಾಮಗಳು

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪ್ರತಿಹಳ್ಳಿಯಲ್ಲಿ ಜಾತಿವಾಚಕ ಸ್ಥಳನಾಮಗಳು ಕಂಡುಬಂದವು. ಆಧುನಿಕತೆ ಸಂದರ್ಭದಲ್ಲಿ ಇವು ಹೊಸ ಹೆಸರಾಗಿ ಬದಲಾಗಿವೆ. ಕೆಲವು ಊರುಗಳು ಆ ಜಾತಿಯವರು ಇಲ್ಲದಿದ್ದರೂ ಹಿಂದಿನ ಹೆಸರು ಉಳಿದುಬಂದಿದೆ. ನಿರ್ದಿಷ್ಟ ಅಂತ್ಯದಲ್ಲಿ 'ರ' ಇದ್ದರೆ ಮತ್ತು ನಿರ್ದಿಷ್ಟ ಅಂತ್ಯದಲ್ಲಿ 'ನ' ಇದ್ದು ಅದು 'ಅ' ಕಾರ ಸ್ವರಾಂತ್ಯವಾಗಿದ್ದರೆ ಅಂತಹವು ಜನಾಂಗವಾಚಕ ಸ್ಥಳನಾಮಗಳಾಗಿರುತ್ತವೆ.

| | |
|---|---|
| ಕುರುಬರಹಳ್ಳಿ | ಉಪ್ಪಾರಹಳ್ಳಿ |
| ಗೊಲ್ಲಹಳ್ಳಿ | ನಾಗರೆಡ್ಡಿಹಳ್ಳಿ |
| ಶೆಟ್ಟಿಹಳ್ಳಿ | ಹಿರಣ್ಯಗೌಡನಹಳ್ಳಿ |
| ಶೆಟ್ಟಿಕಲ್ಲು | ಬೋವಿನಹಳ್ಳಿ |
| ಮಲ್ಲನಾಯಕನಹಳ್ಳಿ | ಕರಿವಿರೆಡ್ಡಿಹಳ್ಳಿ |
| ಮಡಿವಾಳ | ಕಾಪು ಚಿಕ್ಕನಹಳ್ಳಿ |
| ಅಲಾಲ ಸಂದ್ರ | ತುರುಕರ ಹಳ್ಳಿ |

## 2.3 ವ್ಯಕ್ತಿವಾಚಕ ಸ್ಥಳನಾಮಗಳು

ತಾಲೂಕಿನಲ್ಲಿ ಅರಸರು, ಪಾಳೇಗಾರರು, ವೀರರು, ಮಾಂಡಲಿಕರು ಮತ್ತು ಗ್ರಾಮದ ಮುಖಂಡರು ತಮ್ಮ ನಾಡಿಗಾಗಿ ಹೋರಾಟ ನಡೆಸಿ ಪ್ರಾಣಾಹುತಿ ನೀಡಿದ್ದಾರೆ. ಅಂತಹ ಸಂದರ್ಭದಲ್ಲಿ ಅವರ ಸ್ಮರಣೆಗಾಗಿ ಅವರ ಹೆಸರಿಟ್ಟಿರುವುದು ಕಂಡುಬರುತ್ತದೆ. ದೊಡ್ಡ ಜಮೀನ್ದಾರರ ಸ್ವಾಮಿ ಭಕ್ತಿಗಾಗಿಯೂ ಸ್ಥಳಕ್ಕೆ ಹೆಸರಿಟ್ಟಿರುವುದು ತಿಳಿದುಬರುತ್ತದೆ. ವಿದ್ವಾಂಸರು ಅಭಿಪ್ರಾಯಪಡುವಂತೆ ನಿರ್ದಿಷ್ಟ ಅಂತ್ಯದಲ್ಲಿ ನ,ಣ ಗಳಿದ್ದರೆ 'ಏ' ಕಾರವಿದ್ದರೆ ಮತ್ತು ಲಾ, ಳಾ, ಬ್ಬೆ, ಕ್ಕ ಇದ್ದರೆ ಅದು ವ್ಯಕ್ತಿವಾಚಕ ಸ್ಥಳನಾಮವಾಗುತ್ತವೆ.

| | | |
|---|---|---|
| ಶ್ರೀರಂಗಪುರ | ಲಕ್ಷ್ಮೀಪುರ | ವೆಂಕಟಾಪುರ |
| ಪದ್ಮಘಟ್ಟ | ಶ್ರೀನಿವಾಸನಗರ | ತಿಮ್ಮರಾವುತನಹಳ್ಳಿ |
| ರಾಜೇಂದ್ರಹಳ್ಳಿ | ತ್ಯಾಗರಾಜಕಾಲೋನಿ | ತಿಮ್ಮನಾಯಕನಹಳ್ಳಿ |
| ನಾಗನಹಳ್ಳಿ | ಸಿದ್ದನಹಳ್ಳಿ | ಮಲ್ಲನಾಯಕನಹಳ್ಳಿ |
| ಬೊಮ್ಮಸಂದ್ರ | ಭೀಮಾಪುರ | ತಿಮ್ಮಾಪುರ |
| ರೆಡ್ಡಿಹಳ್ಳಿ | ಭೀಮನಒಡ್ಡು | ತಿಮ್ಮಾಪುರ |

| | | |
|---|---|---|
| ಗೋಪಸಂದ್ರ | ಮಲ್ಲಪ್ಪನಹಳ್ಳಿ | ಬೈರಸಂದ್ರ |
| ಮಜರಾರಾಮಾಪುರ | ವೆಂಕಟಾದ್ರಿನಗರ | ರಾಮನಲೂರು |
| ಪುಲಿಪಾಪೀನಹಳ್ಳಿ | ಶಿವನಾರಹಳ್ಳಿ | ಬೈರಕೂರು |
| ಕಸಿವಿರೆಡ್ಡಿಹಳ್ಳಿ | ಚೌಡೇನಹಳ್ಳಿ | ನಾಗರೆಡ್ಡಿಹಳ್ಳಿ |
| ರಾಮಾಪುರ | ಅನಂತಪುರ | ನಾರಾಯಣಪುರ |
| ಕೆಂಪಾಪುರ | ವಿರೂಪಾಕ್ಷಿ | ಗೋಪಾಲಪುರ |
| ಕೃಷ್ಣಾಪುರ | ಹರಪನಾಯಕನಹಳ್ಳಿ | ಬಸವನಹಳ್ಳಿ |
| ಮೈಲಾಪುರ | ಶೆಟ್ಟಿಕಲ್ಲು | ಗಂಗೇಪುರ |
| ಚಾಮರೆಡ್ಡಿಹಳ್ಳಿ | ಮಾದಘಟ್ಟ | ಸಿದ್ದಘಟ್ಟ ಇತ್ಯಾದಿ. |
| ವಿಠಲಾಪುರ | | |

### 2.4 ದೈವೀ ವಾಚಕ ಸ್ಥಳನಾಮಗಳು:

ಈ ತಾಲೂಕಿನಲ್ಲಿ ಸ್ಥಳನಾಮಗಳು ದೇವರ ಹೆಸರಿನಿಂದ ಹುಟ್ಟಿಕೊಂಡಿರುವುದನ್ನು ಕಾಣುತ್ತೇವೆ. ಈ ಪ್ರದೇಶದಲ್ಲಿ ಹಿಂದೂ, ಇಸ್ಲಾಂ, ಕ್ರೈಸ್ತ ಧರ್ಮಗಳೂ ತಮ್ಮ ವ್ಯಾಪಕ ಪ್ರಭಾವವನ್ನು ಬೀರಿವೆ. ವೈದಿಕ ಧರ್ಮಗಳಲ್ಲಿ ವಿವಿಧ ಪಂಗಡಗಳು ಕಂಡುಬರುವುದರಿಂದ ನಂಬಿಕೆಗಳ ಆಧಾರದ ಮೇಲೆ ದೈವಿ ವಾಚಕ ಹೆಸರುಗಳು ಕಂಡುಬರುತ್ತವೆ. ಉದಾ: ಲಿಂಗಾಪುರ, ರಾಮಾಪುರ, ಲಕ್ಷ್ಮೀಪುರ, ಗೋಪಾಲಪುರ, ಕೃಷ್ಣಾಪುರ, ರಾಮಚಂದ್ರಾಪುರ, ಚೌಡೇನಹಳ್ಳಿ, ಹನುಮನಹಳ್ಳಿ, ನಾಗಮಂಗಲ, ಮಾದಘಟ್ಟ

### 2.5 ಚಾರಿತ್ರಿಕ/ ಐತಿಹಾಸಿಕ ಸ್ಥಳನಾಮಗಳು:

ಈ ಪ್ರಾಂತ್ಯವನ್ನು ಅನೇಕ ಸಂತತಿಗಳು ಆಳ್ವಿಕೆಗೆ ನಡೆಸಿದುವು. ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ದೊರೆಗಳು, ಮೈಸೂರು ಒಡೆಯರು ತಮ್ಮ ಅನುಕೂಲಕ್ಕೆ ತಕ್ಕಂತೆ ಸ್ಥಳನಾಮಗಳನ್ನು ಹೆಸರಿಸಿ ಮತ್ತು ಬದಲಾವಣೆ ಮಾಡಿಕೊಂಡಿರುವುದು ಶಾಸನಗಳ ಮೂಲಕ ತಿಳಿದುಬರುತ್ತದೆ. ಅಗ್ರಹಾರ, ಭಂಡಾರಹಳ್ಳಿ, ನಗವಾರ, ಸೋಮರಸನಹಳ್ಳಿ, ಗೋಣಿಕುಪ್ಪೆ, ಭೀಮನಒಡ್ಡು, ಗುಮ್ಮಕಲ್ಲು, ವೀರಶೆಟ್ಟಿಹಳ್ಳಿ, ಮುದಿಗೆರೆ, ಅಗರ, ರಾಮರಾಯನಕೋಟೆ, ಕದರೀಪುರ, ವೆಂಕಟಾದ್ರಿನಗರ, ಗಂಗನಹಳ್ಳಿ, ಹರಪನಾಯಕನಹಳ್ಳಿ, ದೇವರಾಯಸಂದ್ರ, ಶ್ರೀನಿವಾಸನಗರ, ಚೋಳಘಟ್ಟ, ತಿಮ್ಮನಾಯಕನಹಳ್ಳಿ, ರಾಮನಾಥಪುರ, ಗಂಗೇಪುರ, ಮಲ್ಲನಾಯಕನಹಳ್ಳಿ, ಭೀಮಾಪುರ, ವಿರೂಪಾಕ್ಷಿ, ಆವಣಿ.

### 2.6 ಹಳೆ/ಹೊಸ ಎಂಬ ನಾಮ ವಿಶೇಷಣವಿರುವ ಸ್ಥಳಗಳು:

ಒಂದು ನಿರ್ದಿಷ್ಟ ಸ್ಥಳದಲ್ಲಿ ವಾಸಿಸುವ ಜನರು ಆಧುನಿಕತೆಯ ಅನುಕೂಲಕ್ಕಾಗಿ ಕೃಷಿಯಾಧರಿಸಿ ಮತ್ತೊಂದೆಡೆ ನೆಲಸುವುದು, ನೆಲಸುತ್ತಿರುವುದು ತಿಳಿದುಬರುತ್ತದೆ. ಈ ಭಾಗದಲ್ಲಿ ಕಂಡುಬರುವ ಸ್ಥಳಗಳೆಂದರೆ– ಹೊಸಹಳ್ಳಿ–5, ಹೊಸೂರು, ಹೊಸಕೆರೆ,

ಹಳೇಕುಪ್ಪೆ, ಸೀಗೆಹೊಸಹಳ್ಳಿ, ಕೊತ್ತೂರು-9, ಕೊತ್ತಮಂಗಲ, ಹೊಸಮನೆಗಳು, ಹಳೆಕುಪ್ಪೆ ಇತ್ಯಾದಿ.

**2.7 ಧಾರ್ಮಿಕ ವಾಚಕ ಸ್ಥಳನಾಮಗಳು:**

ಈ ತಾಲೂಕಿನಾದ್ಯಂತ ವಿವಿಧ ಧರ್ಮಗಳ ಪರಂಪರೆಯ ಸ್ಥಳಗಳನ್ನು ಮತ್ತು ದೇವಾಲಯಗಳನ್ನು ಗುರುತಿಸುತ್ತೇವೆ. ವೈದಿಕ ಪರಂಪರೆಯಲ್ಲಿ ಶೈವ ಮತ್ತು ವೈಷ್ಣವ ಧರ್ಮದ ಸ್ಥಳನಾಮಗಳನ್ನು ಕಾಣಬಹುದು.

| ಶೈವ ಪರಂಪರೆ ಸ್ಥಳನಾಮಗಳು | ವೈಷ್ಣವ ಪರಂಪರೆ ಸ್ಥಳನಾಮಗಳು |
|---|---|
| ಸೋಮರಸನಹಳ್ಳಿ | ಗೋಪಾಲಪುರ |
| ಲಿಂಗಾಪುರ | ಕೃಷ್ಣಾಪುರ |
| ಸಿದ್ದಘಟ್ಟ | ಶ್ರೀರಂಗಪುರ |
| ಸೋಮನಾಥಪುರ | ರಾಮನಾಥಪುರ |
| ಬಸವನಹಳ್ಳಿ | ಹನುಮನಹಳ್ಳಿ |
| ಮೈಲಾಪುರ | ಲಕ್ಷ್ಮೀಪುರ |
| ಕಾಶೀಪುರ | ರಾಮಚಂದ್ರಪುರ |

**ತಾಲೂಕಿನಲ್ಲಿ ಕೆಲವು ಹಳ್ಳಿಗಳಿಗೆ ಎರಡೆರಡು ಹೆಸರುಗಳು ಇರುವುದುಂಟು:**

- ಜೆ.ಒಬೇನಹಳ್ಳಿ – ದಿಗುವಪಲ್ಲಿ
- ಬೇವಹಳ್ಳಿ – ಎಮಪಲ್ಲಿ
- ಶ್ರೀನಿವಾಸನಗರ – ಜೋಗಿ ಗುಡಿಸಲು
- ಇರಗಮುತ್ತುಗಹಳ್ಳಿ – ಬಾಬನ್ನಗಾರಿ ಇಂಡ್ಲು

ತಾಲೂಕಿನಲ್ಲಿರುವ ಹಲವು ಗ್ರಾಮಗಳು ಹೊಸದಾಗಿ ರೂಪುಗೊಂಡಿರುವುದರಿಂದ ಪಂಚಾಯ್ತಿ ವ್ಯಾಪ್ತಿಯಲ್ಲಿರುವುದರಿಂದ ಮೊದಲು ಸಂಕೇತ (ಇನಿಷಿಯಲ್) ಅನಂತರ ಹಳ್ಳಿ ಹೆಸರು ಕಂಡುಬರುತ್ತದೆ. ಉದಾ:

- ಟಿ. ಅಗರ (ತಾಯಲೂರು ಅಗರ)
- ಎಚ್.ಗೊಲ್ಲಹಳ್ಳಿ, ಎಚ್.ಕೋಡಹಳ್ಳಿ, ಎಚ್.ಬೈಪಲ್ಲಿ, ಎಚ್.ಕೊತ್ತೂರು (ಹೆಬ್ಬಣಿ)
- ಸಿ. ಹೊಸಹಳ್ಳಿ (ಚಿಕೂರು ಹೊಸಹಳ್ಳಿ )
- ಜಿ. ವಡ್ಡಹಳ್ಳಿ (ಗುಡಿಪಲ್ಲ ವಡ್ಡಹಳ್ಳಿ )
- ಜಿ. ಮಾರಾಂಡಹಳ್ಳಿ (ಗಡೂರು ಮಾರಾಂಡಹಳ್ಳಿ )

**ಪರಾಮರ್ಶನ ಗ್ರಂಥಗಳು:**

1. ಪಾಂಡವಪುರ ತಾಲೂಕು, ಸ್ಥಳನಾಮಗಳು (ಅ.ಪ್ರ), ಮಹಾಪ್ರಬಂಧ, 2005, ಪು.ಸಂ. 02
2. ಚಿತ್ತರಂಜನ್.ಹೆಚ್, ಕೋಲಾರ ಜಿಲ್ಲಾ ಗ್ಯಾಸೆಟಿಯರ್ 2005, ಪುಟ 694
3. ಆವಣಿಕಾಶಿ, (2014) ಸಂಘರ್ಷ ಸಾರಥಿ, ಮುಳಬಾಗಿಲು: ಸೌಹಾರ್ದ ಪ್ರಕಾಶನ.
4. ಕೃಷ್ಣಪ್ಪ, (2007), ಕೋಗಿಲಹಳ್ಳಿ ಕೋಲಾರ ವೈಭವ (ಕವನ ಸಂಕಲನ), ಕೆ.ಜಿ.ಎಫ್: ಕಿರಣ ಕಿಶೋರ ಪ್ರಕಾಶನ.
5. ಗೋಪಾಲಕೃಷ್ಣ ವಿ., (2012), ಕೋಲಾರ ಜಿಲ್ಲೆ ಸ್ಥಳನಾಮಗಳು, ಬೆಂಗಳೂರು: ಅಖಿಲ ಭಾರತ ಮುಂಡಾಲ ಸಮಾಜ ಚಾರಿಟಬಲ್ ಟ್ರಸ್ಟ್.
6. ಚಂದ್ರೇಗೌಡ ಎನ್., (2011), ಚನ್ನರಾಯಪಟ್ಟಣ ತಾಲೂಕಿನ ಸ್ಥಳನಾಮಗಳ ಅಧ್ಯಯನ, ಮೈಸೂರು: ಅರ್ಪಿತಾ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್.
7. ನರಸಿಂಹನ್ ಕೆ.ಆರ್., (2010), ಕುವಳಾಲ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೋಲಾರ ಜಿಲ್ಲೆ.
8. ನರಸಿಂಹನ್, ಕುರುಡುಮಲೆ ಕೆ.ಆರ್., (2012), ಡಿ.ವಿ.ಜಿ ಪ್ರತಿಷ್ಠಾನ ಕೋಲಾರ ಪತ್ರಿಕೆ, ಕೋಲಾರ.
9. ನರಸಿಂಹನ್ ಕೆ.ಆರ್., (2012), ಮುಳಬಾಗಿಲು ಇತಿಹಾಸ, ಬೆಂಗಳೂರು: ದರ್ಶನ ಪ್ರಿಂಟರ್ಸ್.
10. ನರಸಿಂಹೇಗೌಡ ನಾರಾಣಪುರ, (2005), ಕೋಲಾರ ಜಿಲ್ಲೆಯ ಆಚರಣೆಗಳು ಮತ್ತು ಸಂಪ್ರದಾಯಗಳು.